ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ **'ಬಿ'** ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149    🖷: 08224-256051    Email: jsscwk@gmail.com    www.jsscwkgl.org

**ಪ್ರಕಟಣೆಯ ಕೃಪೆಗಾಗಿ**

**ಪರಿಸರ, ಸಂಸ್ಕೃತಿ,ಐಕ್ಯತೆ ಮೆರೆಸಿದ ಎನ್‌ಎಸ್‌ಎಸ್ ಶಿಬಿರ**

ಕೊಳ್ಳೇಗಾಲ: 19.3.19 ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ವತಿಯಿಂದ ಹನೂರಿನ ಕಾಮಗೆರೆಯಲ್ಲಿ ಎನ್‌ಎಸ್‌ಎಸ್ ಶಿಬಿರವು ಒಂದು ವಾರದ ಕಾಲ ಪರಿಸರ, ಜಾತ್ಯತೀತತೆ, ಐಕ್ಯತೆ, ಸಂಸ್ಕೃತಿ ಮೆರೆಸುವಲ್ಲಿ ಯಶಸ್ವಿಯಾಗಿದೆ.

ಶಿಬಿರದಲ್ಲಿ ಶಿಬಿರಾರ್ಥಿಗಳು ಶ್ರಮದಾನದ ಮೂಲಕ ಗ್ರಾಮದ ಬೀದಿಗಳ ಸ್ವಚ್ಛತೆ, ದೇವಸ್ಥಾನ, ಆಸ್ಪತ್ರೆ ಆವರಣದ ಸ್ವಚ್ಛತೆಯಲ್ಲದೆ ಜಾಥಾ ನಡೆಸುವುದರ ಮೂಲಕ ಶೌಚಾಲಯದ ಅಗತ್ಯತೆ, ಬಳಕೆ, ನೀರು-ಕಾಡಿನ ಮಹತ್ವ, ಬಾಲ್ಯವಿವಾಹದ ಅನಾತ, ಶಾಲೆಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸಿ, ಪರಿಸರ ಮತ್ತು ಆರೋಗ್ಯ ಸೇರಿದಂತೆ ವಿವಿಧ ಸರ್ಕಾರಿ ಯೋಜನೆಗಳನ್ನು ಪರಿಚಯಿಸಿದರು.

ಸಂಪನ್ಮೂಲವ್ಯಕ್ತಿಗಳ ಸಾಧಕರು, ಪರಿಸರ ಪ್ರೇಮಿಗಳು, ವೈದ್ಯರ ತಂಡ ಪ್ರತೀದಿನ ಶಿಬಿರಕ್ಕೆ ಭೇಟಿಕೊಟ್ಟು ಶಿಬಿರಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ, ಅರಣ್ಯ ಮತ್ತು ಪರಿಸರ, ಮಹಿಳೆ ಮತ್ತು ಕಾನೂನು, ಯುಜನತೆಯ ಕರ್ತವ್ಯಗಳು, ಮೌಲ್ಯ ಶಿಕ್ಷಣ, ಎನ್‌ಎಸ್‌ಎಸ್ ಹಾಗೂ ಇತರೆ ರಾಷ್ಟ್ರೀಯ ಸೇವಾ ಕಾರ್ಯಕ್ರಮಗಳ ಬಗ್ಗೆ ಉಪನ್ಯಾಸ-ಸಂವಾದ ಮೂಲಕ ಜಾಗೃತಿ ಮೂಡಿಸಿದರು. ಪ್ರತೀದಿನ ಸಂಜೆ ಶಿಬಿರಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮಸ್ಥರಿಗೆ ರಸದೌತಣ ನೀಡಿದವು.

ಶಿಬಿರದ ಸಮಾರೋಪ ಭಾಷಣ ಮಾಡಿದ ಸರ್ಕಾರಿ ಶ್ರೀ ಮಹದೇಶ್ವರ ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ.ಜಿ.ಮಹದೇವ(ಮನೋರಕ್ಷಿತ ಬಂತೇಜಿ) ಇವರು ಎನ್‌ಎಸ್‌ಎಸ್ ಶಿಬಿರಾರ್ಥಿಗಳಲ್ಲಿ ಒಳ್ಳೆಯ ವಿಚಾರಗಳು ಹಾಗೂ ಆಲೋಚನೆಗಳನ್ನು ನೀಡಿದೆ. ಇಲ್ಲಿನ ಅನುಭವಗಳನ್ನು ಸದುಪಯೋಗಪಡಿಸಿಕೊಂಡು ಆದರ್ಶಕ ಬದುಕನ್ನು ಕಟ್ಟಿಕೊಂಡು ಇತರರಿಗೂ ಆದರ್ಶಪ್ರಿಯರಾಗಿರಿ ಎಂದು ತಿಳಿಸಿದರು.

ಪ್ರಾಚಾರ್ಯ ಪ್ರೊ.ಉಮೇಶ ಅಧ್ಯಕ್ಷತೆ ವಹಿಸಿದ್ದರು, ಸಂತ ಮಾರ್ಗರೇಟ್ ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷರಾದ ರೆವರೆಂಟ್ ಫಾದರ್ ಎಸ್.ಡಿ.ಜೋಸೆಫ್, ಪ್ರಾಂಶುಪಾಲ ಶ್ರೀ ನಂಜುಂಡಸ್ವಾಮಿ, ಕಾರ್ಯಕ್ರಮಾಧಿಕಾರಿ ಪ್ರೊ.ಬಸವರಾಜು, ಪ್ರೊ.ಪ್ರಕಾಶ್, ಪ್ರೊ.ಎ.ಪಿ ಮಹದೇವಪ್ಪ, ಪ್ರೊ.ಮಂಜುನಾಥ್ ಮತ್ತು ಪ್ರೊ.ಅರ್ಚನ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಹನೂರಿನ ಕಾಮಗೆರೆಯಲ್ಲಿ ಎನ್‌ಎಸ್‌ಎಸ್ ವಾರ್ಷಿಕ ಶಿಬಿರ ಸಮರೋಪ ಸಮಾರಂಭ




ಪ್ರೊ.ಜಿ.ಮಹದೇವರವರು ಸಮಾರೋಪ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಪ್ರಕಾಶ್, ಪ್ರೊ.ಎ.ಪಿ ಮಹದೇವಪ್ಪ, ಪ್ರಾಚಾರ್ಯ ಪ್ರೊ.ಉಮೇಶ, ರೇವರೆಂಟ್ ಫಾದರ್ ಎಸ್.ಡಿ.ಜೋಸೆಫ್ ಪ್ರೊ.ಬಸವರಾಜು ಮತ್ತು ಪ್ರೊ.ಮಂಜುನಾಥ್‌ರವರನ್ನು ಕಾಣಬಹುದು.



ಪ್ರಾಚಾರ್ಯ ಪ್ರೊ.ಉಮೇಶರವರು ಅಧ್ಯಕ್ಷ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಪ್ರಕಾಶ್, ಪ್ರೊ.ಎ.ಪಿ ಮಹದೇವಪ್ಪ, ಪ್ರೊ.ಜಿ.ಮಹದೇವ, ರೇವರೆಂಟ್ ಫಾದರ್ ಎಸ್.ಡಿ.ಜೋಸೆಫ್ ಪ್ರೊ.ಬಸವರಾಜು ಮತ್ತು ಪ್ರೊ.ಮಂಜುನಾಥ್‌ರವರನ್ನು ಕಾಣಬಹುದು.

